**ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ.,**

**ನ್ಯಾಯಾಲಯ, ಹಾವೇರಿ.**

**ಸಿ.ಸಿ. ನಂ. 1644/2023**

ಡಿ.ಡಬ್ಲ್ಯೂ- 1

| | | |
|---|---|---|
| ಹೆಸರು | : | ದುರ್ಗಪ್ಪ ಶಿವಪ್ಪ ಬಣಕಾರ |
| ತಂದೆಯ ಹೆಸರು | : | ಶಿವಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಕುರಗುಂದ, ತಾಃ ಹಾವೇರಿ |

**ದಿನಾಂಕಃ 20-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಶ್ರೀ ಪಿ.ಜಿ .ಎಲ್. ಆರೋಪಿ ಪರ ವಕೀಲರಿಂದಃ**

ಪಿರ್ಯಾದುದಾರರ ಶೋ ರೂಂನಲ್ಲಿ ನಾನು ಐಶರ್ ಟ್ರ್ಯಾಕ್ಟರನ್ನು ತೆಗೆದುಕೊಳ್ಳಲು ಬಂದಿದ್ದು, ಸದ್ರಿ ಟ್ರ್ಯಾಕ್ಟರನ್ನು ರೂ. 6,75,000/- ಗಳಿಗೆ ಕೊಡುವುದಾಗಿ ಆಗಿದ್ದು, ಸದರಿ ಹಣಕ್ಕೆ ಎಲ್.ಎನ್.ಟಿ. ಫೈನಾನ್ಸನಲ್ಲಿ ರೂ.4,77,281/- ಗಳಿಗೆ ಸಾಲ ಮಂಜೂರಾಗಿತ್ತು. ಸದ್ರಿ ರೂಾ. 6,75,000/-ಗಳ ಪೈಕಿ ರೂ.1,97,881/- ಡಿಸ್ಕೌಂಟ ಹೋಗಿ ರೂ.4,77,281/-ಗಳನ್ನು ಫೈನಾನ್ಸನಲ್ಲಿ ಸಾಲ ಪಡೆದು ಕೊಟ್ಟಿರುತ್ತೇನೆ. ಸದ್ರಿ ಟ್ರ್ಯಾಕ್ಟರನ್ನು ತೆಗೆದುಕೊಳ್ಳುವಾಗ ಪ್ರತಿಯೊಬ್ಬ ರೈತರು ಚೆಕ್ ಕೊಟ್ಟಿರುತ್ತಾರೆಂದು ನನ್ನ ಕಡೆಯಿಂದ ಒಂದು ಚೆಕ್‌ನ್ನು ಪಿರ್ಯಾದುದಾರರು ಪಡೆದಿರುತ್ತಾರೆ. ನಂತರ ಸದ್ರಿ ಟ್ರ್ಯಾಕ್ಟರನ ಖರೀದಿ ಮಾಡಿದ ಮೇಲೆ ಚೆಕ್‌ನ್ನು ವಾಪಸ್ಸ ಕೊಡುವಂತೆ ಕೇಳಿದಾಗ ಪಿರ್ಯಾದುದಾರರು ನಾನು ಬ್ಯುಸಿ ಇದ್ದೇನೆ ಆಮೇಲೆ ಕೊಡುತ್ತೇನೆ ಎಂದು ಹೇಳಿದ್ದರು. ಸದ್ರಿ ಟ್ರ್ಯಾಕ್ಟರ ಒಂದು ಸಲ ರಿಪೇರಿಗೆ ಬಂದಿದ್ದು, ಆಗ ನಾನು ಪಿರ್ಯಾದುದಾರರ ಶೋ ರೂಂ ಗೆ ತೆಗೆದುಕೊಂಡು ಹೋಗಿ ಸದ್ರಿ ಟ್ರ್ಯಾಕ್ಟರನ್ನು

ಸರಿಯಾಗಿ ರಿಪೇರಿ ಮಾಡಿಕೊಡಿ, ಅದರಲ್ಲಿ ಸಮಸ್ಯೆಯಾಗುತ್ತಿದೆ ಎಂದು ಹೇಳಿದ್ದೆ ಆಗ ಚೆಕ್‌ನ್ನು ವಾಪಸ್ಸ ಕೊಡುವಂತೆ ಅಲ್ಲಿ ಮ್ಯಾನೇಜರ ಹತ್ತಿರ ಕೇಳಿದ್ದೆ. ಆಗ ಅವರು ನನಗೆ ಗೊತ್ತಿಲ್ಲ, ಪಿರ್ಯಾದುದಾರರನ್ನು ಕೇಳಿ ಎಂದು ಹೇಳಿದ್ದರು. ಪಿರ್ಯಾದುದಾರರು ಆಗ ಕುಂದಗೋಳದಲ್ಲಿ ಇದ್ದಾರೆಂದು ಮ್ಯಾನೇಜರವರು ಹೇಳಿದ್ದರು. ಆ ನಂತರ ಇಲ್ಲಿಯವರೆಗೂ ಪಿರ್ಯಾದುದಾರರು ನನಗೆ ಸಂಪರ್ಕಕ್ಕೆ ಸಿಗಲಿಲ್ಲ.

ಪಿರ್ಯಾದುದಾರರ ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ನೀಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)**

ಓ ಹೇ ಕೇ ಸರಿ ಇದೆ.

-ಸಹಿ-

1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಹಾವೇರಿ.